ತುರುವೇಕೆರೆ ತಾಲ್ಲೂಕಿನಲ್ಲಿ ಬಾಬಿಗಳು ವಿಫಲವಾಗಿರುವುದು

3209 (3718) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಭೂ ಅಭಿವೃದ್ಧಿ ಸಹಕಾರಿ ಬ್ಯಾಂಕ್‌ನಲ್ಲಿ ಸಾಲ ಪಡೆದು ಬಾವಿಗಳನ್ನು ತೆಗೆದ ಫಲಾನುಭವಿಗಳೆಷ್ಟು; ವಿವರ ಒದಗಿಸುವುದು;

ಆ) ಇದರಲ್ಲಿ ವಿಫಲವಾದ ಬಾವಿಗಳೆಷ್ಟು, ಈಗಾಗಲೇ ಗುರುತಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ವಿಫಲವಾದ ಬಾವಿಗಳ ಫಲಾನುಭವಿಗಳ ಸಾಲವನ್ನು ಮನ್ನಾ ಮಾಡಲಾಗಿದೆಯೇ.

ಈ) ಕೆಲವು ಫಲಾನುಭವಿಗಳನ್ನು ಕೈಬಿಟ್ಟಿರಲು ಕಾರಣವೇನು, ಈಗಲಾದರೂ ಗುರುತಿಸಿ ಅವರಿಗೆ ಅನುಕೂಲ ಮಾಡಿಕೊಡಲಾಗುವುದೇ,

ಉ) ಸರ್ಕಾರ ಸಾಲವನ್ನು ಪೂರ್ಣವಾಗಿ ವಜಾ ಮಾಡಿ ರೈತರಿಗೆ ಸಹಾಯ ಮಾಡುವುದೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ತುರುವೇಕೆರೆ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು ಈತಹಲ್‌ವರೆವಿಗೂ ಒಟ್ಟು 13.48 ಬಾವಿಗಳಿಗೆ ಸಾಲ ನೀಡಿದ್ದು, ಸಾಲ ನೀಡಿದ ಮೊತ್ತ ರೂ. 161.76 ಲಕ್ಷಗಳು

ಆ) ಇದರಲ್ಲಿ ವಿಫಲವಾದ ಬಾವಿಗಳು 168 ಇವುಗಳನ್ನು ಈಗಾಗಲೇ ಗುರ್ತಿಸಲಾಗಿದೆ.

ಇ) ಇವುಗಳ ಪೈಕಿ 83 ಪ್ರಕರಣಗಳಿಗೆ ಈಗಾಗಲೇ ವಿಫಲಬಾವಿ ಪರಿಹಾರ ಧನ ಬಿಡುಗಡೆಯಾಗಿದ್ದು, ಸಾಲವನ್ನು ಮನ್ನಾ ಮಾಡಲಾಗಿದೆ. ಉಳಿದ 85 ಪ್ರಕರಣಗಳು ತುಮಕೂರು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಪರಿಶೀಲನಾ ಹಂತದಲ್ಲಿದೆ.

ಈ) ವಿಫಲವಾವಿ ಪರಿಹಾರ ಧನ ಕೋರಿ ಅರ್ಜಿ ಸಲ್ಲಿಸಿರುವವರ ಪೈಕಿ ಕೇವಲ ಒಂದು ಪ್ರಕರಣ ಕೈಬಿಡಲಾಗಿದೆ. ಶ್ರೀ ಮಹಾಲಿಂಗಯ್ಯ ಬಿನ್ ಈರಪ್ಪ ತೋವಿನಕೆರೆ) ಇವರು ತೋವಿನಕೆರೆ ಗ್ರಾಮದ ತಮ್ಮ ಜಮೀನಿನಲ್ಲಿ ಸುಮಾರು 20 ಅಡಿ ಅಲ್ಪದ 7 ಅಡಿ ಆಳದ ಬಾವಿಯನ್ನು ತೋಡಿದ್ದು, ಬಾವಿಯ ಕೆಲಸವನ್ನು ಪೂರ್ಣ ಪ್ರಮಾಣದಲ್ಲಿ ತೋಡಿರುವುದಿಲ್ಲ. ಈ ವಿಷಯವನ್ನು ತಿಪಟೂರು ಉಪ ವಿಭಾಗಾಧಿಕಾರಿಯವರು ವರದಿ ಮಾಡಿದ್ದು, ಈ ವರದಿಯನ್ವಯ ತುಮಕೂರು ಜಿಲ್ಲಾಧಿಕಾರಿಯವರು ಈ ವರದಿಯನ್ವಯ ತುಮಕೂರು ಜಿಲ್ಲಾಧಿಕಾರಿಯವರು ಅವರ ಅದೀತ ಸಂಖ್ಯೆ: ಟಿಎಬ್ಲಿಸಿಆರ್:46:96–97, ದಿನಾಂಕ: 30.3.2003ರ ಆದೇಶದಲ್ಲಿ ತಿರಸ್ಕರಿಸಿರುತ್ತಾರೆ.

ಉ) ವಿಫಲ ಬಾವಿಯೆಂದು ಮಂಜೂರಾದ ಪ್ರಕರಣಗಳಲ್ಲಿ ಸಾಲವನ್ನು ಪೂರ್ಣವಾಗಿ ವಜಾ ಮಾಡಿ ರೈತರಿಗೆ ಸಹಾಯ ಮಾಡಲಾಗುತ್ತಿದೆ.

ರಾಜ್ಯದಲ್ಲಿ ತೆಂಗಿನ ಮರಗಳಿಗೆ ನುಸಿ ಪೀಡೆ

3210 (3681) ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನುಸಿ ಪೀಡೆಗೆ ತುತ್ತಾಗಿರುವ ತೆಂಗಿನ ಮರಗಳ ಸಂಖ್ಯೆ ಎಷ್ಟು;

ಆ) ಅವುಗಳ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳೇನು;

ಇ) ಕಳೆದ 3 ವರ್ಷಗಳಿಂದ ಈ ನುಸಿ ಪೀಡೆಯನ್ನು ನಿಯಂತ್ರಣಕ್ಕೆ ತರಲಾಗಿದೆಯೇ; ಇದಕ್ಕೆ ತಗಲಿರುವ ವೆಚ್ಚವೆಷ್ಟು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) 2002–03ನೇ ಸಾಲಿನ ಕುಳವಾರು ಪಟ್ಟಿ ಸಮೀಕ್ಷೆ ಪ್ರಕಾರ 433 ಲಕ್ಷ.

ಆ) ತೆಂಗಿನ ಮರಗಳ ಆರೋಗ್ಯ ಸುಧಾರಿಸಲು ಮತ್ತು ರೋಗ ನಿರೋಧಕ ಶಕ್ತಿ ವೃದ್ಧಿಸಲು ಸಮಗ್ರ ಬೇಸಾಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಅರಿವು ಮೂಡಿಸಲು ರಾಜ್ಯಾದ್ಯಂತ ರೈತರ ತೋಟಗಳಲ್ಲಿ 100 ಬ್ಲಾಕ್ ಪ್ರಾತ್ಯಕ್ಷತೆ ಹಾಗೂ 650 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಾರಂಭಿಕವಾಗಿ 12 ಬ್ಲಾಕ್ ಪ್ರಾತ್ಯಕ್ಷತೆಗಳು ಹಾಗೂ 24 ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಉಳಿದ ಬ್ಲಾಕ್ ಪ್ರಾತ್ಯಕ್ಷತೆಗಳನ್ನು ಏರ್ಪಡಿಸಲು ಪೂರ್ವ ಸಿದ್ಧತೆ ಮಾಡಲಾಗುತ್ತಿದೆ.

ಇ) ನುಸಿಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ಸಾಧ್ಯವಾಗುವುದಿಲ್ಲವೆಂದು ತಜ್ಞರ ಅಭಿಮತವಾಗಿದೆ. ಸ್ವಲ್ಪಮಟ್ಟಿಗೆ ನುಸಿ ಬಾಧೆ ಕಡಿಮೆ ಆಗಿತ್ತು. ಆದರೆ ಬರಗಾಲದ ಪರಿಣಾಮವಾಗಿ ಮತ್ತೆ ನುಸಿಭಾದೆಯಲ್ಲಿ ಹೆಚ್ಚಳವಾಗುತ್ತಿರುವುದು ಕಂಡುಬಂದಿದೆ. ನುಸಿ ನಿರ್ವಹಣೆಗಾಗಿ 1999–2000 ದಿಂದ 2002–03ರ ವರೆಗೆ ರೂ. 1412.61 ಲಕ್ಷಗಳನ್ನು ಬಳಕೆ ಮಾಡಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸುವುದು

3213 (3661) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳಿವೆ: ಈಗ ಅನೇಕ ಗ್ರಾಮಗಳಿಗೆ ಇವುಗಳ ಅವಶ್ಯಕತೆ ಇದ್ದು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಪ್ರಾರಂಭಿಸಲು ಕ್ರಮ ಕೈಗೊಳ್ಳುವಿರಾ:

ಆ) ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೀರಾ ಸಲ್ಲಿಸಿದ್ದಲ್ಲಿ, ಯಾವ ಹಂತದಲ್ಲಿದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) 1526 ಅಂಗನವಾಡಿ ಕೇಂದ್ರಗಳು

ಇಲ್ಲ

ಆ) 28.02.02ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸಂಪನ್ಮೂಲ ಕೊರತೆಯಿಂದ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಸಧ್ಯಕ್ಕೆ ಮಂಜೂರು ಮಾಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 2–1/200–ಸಿಡಿ–1, ದಿನಾಂಕ: 16.09.02 ರಲ್ಲಿ ತಿಳಿಸಿರುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಗುಂಪುಗಳಿಗೆ ಬಿಡುಗಡೆಯಾದ ಹಣ

3214 (3662) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಸ್ತ್ರೀಶಕ್ತಿ ಸಂಘಗಳಿವೆ?

ಆ) ಇದರ ಯೋಜನೆಯಲ್ಲಿ ಆ ಸಂಘಗಳಿಗೆ ಬಿಡುಗಡೆಯಾದ ಹಣದ ವಿವರ, ತಾಲ್ಲೂಕುವಾರು ಪ್ರತ್ಯೇಕ ಸಂಘಗಳವಾರು ವರದಿ ನೀಡುವುದು

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 1285 ಸ್ತ್ರೀಶಕ್ತಿ ಗುಂಪುಗಳಿವೆ.

ಆ) ಸ್ತ್ರೀಶಕ್ತಿ ಯೋಜನೆಯಡಿ ಬಿಡುಗಡೆಯಾಗಿರುವ ಹಣ, ಕಾರ್ಯಕ್ರಮಗಳ ವಿವರಗಳನ್ನು